ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹುಬ್ಬಳ್ಳಿ ತಾಲ್ಲೂಕಿನಲ್ಲಿ ಬುಡರಸಿಂಗಿ ಗುಡ್ಡವಿದ್ದು ಅದರ ಸರ್ವೆ ನಂಬರ 45ಬಿ ಇರುವದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಬುಡರಸಿಂಗಿ ಗುಡ್ಡದ ಸರ್ವೆ ನಂಬರ 45 ಇದರ ಒಟ್ಟು ಕ್ಷೇತ್ರ 80ಎ-12ಗು. ವಿದ್ದು ಕಟ್ಟೂರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಅದರಗುಂಜಿ ಪಂಚಾಯಿತಿ ವ್ಯಾಪ್ತಿಗೆ ಒಳಪಡುವುದಿಲ್ಲ.

ಇ) ಈ ಕೆಳಕಂಡಂತೆ ಜಮೀನುಗಳನ್ನು ಸರ್ಕಾರ ನೀಡಿದೆ.

	ಎ.ಗುಂ.	ಉದ್ದೇಶ	ಹಸ್ತಾಂತರ ಮಾಡಿದ ವರ್ಷ
1.	2.19	ಜೈನ ಬಸದಿಗಾಗಿ	1982-83
2.	30.00	ಸಾಮಾಜಿಕ ಅರಣ್ಯ ಬೆಳೆಸಲು	1990-91
3.	8.00	ಶಾಲೆ ಜನತಾ ಪ್ಲಾಟ್	1992-93
4.	2.00	ರುದ್ರಭೂಮಿಗಾಗಿ	1999-2000
5.	10.00	ಶೈಕ್ಷಣಿಕ	2000-01
6.	27.13	ಹುಲ್ಲುಗಾವಲಿಗಾಗಿ ಕಾಯ್ದಿರಿಸಲು ಸಾರ್ವಜನಿಕರ ಮನವಿ ಇದೆ	

ಈ) ಕಾರ್ಯ ನಿರ್ವಾಹಕ ಅಧಿಕಾರಿಗಳು ತಾಲ್ಲೂಕಾ ಪಂಚಾಯತ ಹುಬ್ಬಳ್ಳಿ ಇವರು ಬ್ಲಾಕ್ ನಂ. 45ಬಿ ರಲ್ಲಿ ಉಳಿದಿರುವ ಕ್ಷೇತ್ರ 27.13 ಪೈಕಿ ಆಶ್ರಯ ಯೋಜನೆಗೆ 20 ಎಕರೆ ಜಮೀನು ಮಂಜೂರು ಮಾಡಲು ವಿನಂತಿಸಿದ್ದು, ಪರಿಶೀಲನೆ ಹಂತದಲ್ಲಿರುತ್ತದೆ. ಸಾರ್ವಜನಿಕರು ದನಕರುಗಳು ಮೇಯಲು ಈ ಜಮೀನು ಬಿಟ್ಟು ಬೇರೆ ಸರ್ಕಾರಿ ಜಮೀನು ಇರುವುದಿಲ್ಲವಾದ್ದರಿಂದ ದನಕರುಗಳಿಗೆ ಹುಲ್ಲುಗಾವಲು ಅಂತಾ ಕಾಯ್ದಿರಿಸಬೇಕು ಬೇರೆ ಯಾರಿಗೂ ಮಂಜೂರ ಮಾಡಬಾರದೆಂದು ಮನವಿ ಸಲ್ಲಿಸಿದ್ದಾರೆ.

ಉ) ಮತ್ತು ಊ) ಅದರಗುಂಜಿ ಪಂಚಾಯಿತಿಯು ಬುಡರಸಿಂಗಿ ಗುಡ್ಡದ ರಿ.ಸ.ನಂ. 45ಬಿ ನೇದ್ದರಲ್ಲಿ ಜಮೀನು ಆಶ್ರಯ ಮನೆ ಯೋಜನೆಗೆ ಕೇಳಿ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ. ಆದರೆ ಸದರಿಯವರು ಕೊಟಗೊಂಡಹುಣಸಿ ಗ್ರಾಮದ ಸರ್ಕಾರಿ ಜಮೀನು ರಿ.ಸ.ನಂ. 186ರಲ್ಲಿ 10ಎಕರೆ ಜಮೀನನ್ನು ಆಶ್ರಯ ಯೋಜನೆಗೆ ಮಂಜೂರು ಮಾಡಲು ಕೋರಿದ್ದಾರೆ. ಕೆಲವು ಅವಶ್ಯ ಮಾಹಿತಿಯನ್ನು ಜಿಲ್ಲಾಧಿಕಾರಿಯವರು ತಹಶೀಲ್ದಾರ ಇವರಿಂದ ಕೋರಲಾಗಿದೆ. ಸದರಿ ಮಾಹಿತಿ ಪಡೆದು ನಿಯಮಾನುಸಾರ ಪರಿಶೀಲಿಸಿ ಅಗತ್ಯತೆ ಅನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ತುಮಕೂರು ನಗರದಲ್ಲಿ ಎಡಿಬಿ ಯೋಜನೆ

300 (2388) ಶ್ರೀ ಎಸ್. ಶಿವಣ್ಣ (ತುಮಕೂರು): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ನಗರದಲ್ಲಿ ಎಡಿಬಿ ಯೋಜನೆಯಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೋಸ್ಕರ ಭೂಸ್ವಾಧೀನ ಪಡಿಸಿಕೊಂಡ ಜಮೀನು ಎಷ್ಟು; ನಿಗಧಿ ಪಡಿಸಲಾದ ಪರಿಹಾರ ಧನವೆಷ್ಟು; ವಿತರಿಸಲಾದ ಪರಿಹಾರ ಮೊತ್ತವೆಷ್ಟು;

ಆ) ಈ ಪ್ರಕ್ರಿಯೆ ಪ್ರಾರಂಭವಾದ ದಿನಾಂಕ ಯಾವುದು;

ಇ) ಈ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಂಡ ನಂತರ ಸಂಬಂಧಪಟ್ಟ ಇಲಾಖೆಯ ಹೆಸರಿಗೆ ಇಂಡೀಕರಣ ಮಾಡಲಾಗಿದೆಯೇ;

ಈ) ಹಾಗಿದ್ದಲ್ಲಿ ಅದನ್ನು ದುರಸ್ತಿ ಮಾಡಲಾಗಿದೆಯೇ; ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ತುಮಕೂರು ನಗರದಲ್ಲಿ ಎಡಿಬಿ ನೆರವಿನಿಂದ ಕೈಗೊಂಡಿರುವ ಕೆಲಸಗಳಿಗೆ 549.13 ಎಕರೆ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಭೂಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ 956.20 ಲಕ್ಷ ರೂ.ಗಳ ಪರಿಹಾರ ಧನ ನಿಗದಿಪಡಿಸಲಾಗಿದ್ದು, ಈ ಪೈಕಿ 812.24 ಲಕ್ಷ ರೂ. ಗಳನ್ನು ಪಾವತಿಸಲಾಗಿದೆ.

ಆ) ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ನಗರಸಭೆ, ತುಮಕೂರು, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರುಗಳು ಭೂ ಸ್ವಾಧೀನ ಸಂಸ್ಥೆಗಳಾಗಿರುತ್ತದೆ. (ಅಕ್ವೆರಿಂಗ್ ಬಾಡಿ) ಈ ಸಂಸ್ಥೆಗಳಿಗೆ ಬೇಕಾಗಿರುವ ಜಮೀನನ್ನು ಉಪ ವಿಭಾಗಾಧಿಕಾರಿ ತುಮಕೂರು ಮತ್ತು ವಿಶೇಷ ಭೂ ಸ್ವಾಧೀನಾಧಿಕಾರಿಗಳು ಕೆಐಎಡಿಬಿ ಇವರು ಸ್ವಾಧೀನಪಡಿಸಿಕೊಂಡಿರುತ್ತಾರೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ತುಮಕೂರು ಇವರು ದಿನಾಂಕ 17-7-96 ರಂದು ನಗರಸಭೆ, ತುಮಕೂರು ಇವರು ದಿನಾಂಕ 28-2-2003 ರಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರು 5-3-1998 ರಂದು ಮತ್ತು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ ಸಂಸ್ಥೆಯು 4-12-95 ರಂದು ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭ ಮಾಡಿರುತ್ತಾರೆ.

ಇ) ಭೂ ಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳನ್ನು ಆಯಾ ಸಂಸ್ಥೆಗಳಿಗೆ ಹಸ್ತಾಂತರ ಮಾಡಿದ ನಂತರ ಭೂ ಸ್ವಾಧೀನ ಅಧಿಕಾರಿಗಳು, ಭೂಸ್ವಾಧೀನ ಕಾಯ್ದೆ ಕಲಂ 16(2)ರ ಪ್ರಕಾರ ಅಧಿಸೂಚನೆಗಳನ್ನು ಹೊರಡಿಸುತ್ತಿರುವ ಪ್ರಕ್ರಿಯೆಯಲ್ಲಿರುತ್ತಾರೆ. ಇದರ ನಂತರ ಭೂ ದಾಖಲೆಗಳಲ್ಲಿ ಮತ್ತು ಭೂ ಮಾಪನ ಇಲಾಖೆಗಳಲ್ಲಿ ದಾಖಲೆಗಳಲ್ಲಿ ಬದಲಾವಣೆಗಳನ್ನು ತರುವಂತೆ ಜಿಲ್ಲಾಧಿಕಾರಿಗಳು, ತುಮಕೂರು ಇವರಿಗೆ ತಿಳಿಸಲಾಗಿದೆ. ಭೂಸ್ವಾಧೀನ ಸಂಸ್ಥೆಗಳು ಸಹ ನಡವಳಿಕೆಗಳ ಪ್ರಕಾರ ಭೂಸ್ವಾಧೀನ ಪಡಿಸಿಕೊಂಡು ಸಂಸ್ಥೆಗಳ ಹೆಸರುಗಳನ್ನು ದಾಖಲೆಗಳಲ್ಲಿ ನಮೂದು ಮೂಡಿಸುವಂತೆ ಸೂಚಿಸಲಾಗಿದೆ.

ಈ) ಭೂ ಸ್ವಾಧೀನ ಕಾಯ್ದೆ 16(2)ರ ಅಡಿಯಲ್ಲಿ ಭೂ ಸ್ವಾಧೀನ ಅಧಿಕಾರಿಗಳು ಅಧಿಸೂಚನೆಗಳನ್ನು ಹೊರಡಿಸುತ್ತಿದ್ದಾರೆ. ತದನಂತರ ಭೂ ಮಾಪನ ಮತ್ತು ಭೂ ದಾಖಲೆ ಇಲಾಖೆ ಫೋಡಿ ಕಾರ್ಯವನ್ನು ಕೈಗೊಳ್ಳಬೇಕಿದೆ. ಉಪ ವಿಭಾಗಾಧಿಕಾರಿ, ತುಮಕೂರು ತಹಸೀಲ್ದಾರ್, ತುಮಕೂರು ಮತ್ತು ಭೂ ದಾಖಲೆಗಳ ಉಪ ನಿರ್ದೇಶಕರು ತುಮಕೂರು ಇವರಿಗೆ ಫೋಡಿ ಕೆಲಸ ಮತ್ತು ಭೂ ದಾಖಲೆಗಳಲ್ಲಿ ಬದಲಾವಣೆಗಳನ್ನು ತರಲು ಸೂಚಿಸಲಾಗಿದೆ.

ರಸ್ತೆ ಡಾಂಬರೀಕರಣಕ್ಕೆ ಹುಡ್ಕೊದಿಂದ ಪಡೆದ ಸಾಲ

301 (2679) ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-03ನೇ ಸಾಲಿನಲ್ಲಿ ಸರ್ಕಾರ ಎಷ್ಟು ಕಿ.ಮೀ. ರಸ್ತೆ ಡಾಂಬರೀಕರಣ ಮಾಡಲು ಗುರಿ ಹೊಂದಿತ್ತು. (ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಇತರೆ ರಸ್ತೆಗಳು ಪ್ರತ್ಯೇಕವಾಗಿ ಮಾಹಿತಿ ನೀಡುವುದು) (ಜಿಲ್ಲಾ ಪಂಚಾಯತ್ ರಸ್ತೆಗಳನ್ನು ಹೊರತುಪಡಿಸಿ);

ಆ) ಈ ಕಾರ್ಯಕ್ಕೆ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಣವೆಷ್ಟು; ಬಿಡುಗಡೆ ಮಾಡಬೇಕಾಗಿರುವ ಬಾಕಿ ಹಣವೆಷ್ಟು;

ಇ) ಡಾಂಬರೀಕರಣಕ್ಕೆ ಕಾಲಮಿತಿ ನಿಗಧಿಗೊಳಿಸಲಾಗಿದೆಯೇ;